## ನಕ್ಕುಬಿಡಿ



### ಸ್ತ್ರೀ ರಹಸ್ಯ

ಜ್ಯೋತಿ: ನಾನು ನಿನಗೆ ಹೇಳಿರುವ ಗುಟ್ಟನ್ನು ನೀನು ಸಂಧ್ಯಾಗೆ ತಿಳಿಸಿರುವುದನ್ನು ಅವಳು ನನಗೆ ಹೇಳಿದಳು.

ಸವಿತಾ: ಸರಿ; ಆದರೆ ಅವಳಿಗೆ ಹೇಳಿದ್ದನ್ನು ನಿನಗೆ ತಿಳಿಸಬಾರದಾಗಿ ನಾನು ತಾಕೀತು ಮಾಡಿದೆ...?

ಜ್ಯೋತಿ: ಆಯ್ತು, ಕಣೆ, ಅವಳು ನನಗೆ ಹೇಳಿದ್ದನ್ನು ನಿನಗೆ ನಾನು ತಿಳಿಸಿರುವೆನೆಂದು ನೀನವಳಿಗೆ ಹೇಳಬೇಡ!

★★★

### ನೆನಪು ಶಕ್ತಿ

ಗೋಪಿ: ಜೀವಮಾನದಲ್ಲಿ ನಾನು ಎರಡು ಚಿನ್ನದ ಪದಕಗಳನ್ನು ಗೆದ್ದಿರುವೆ.

ರಾಮು: ತುಂಬಾ ಒಳ್ಳೆಯದು, ಯಾವ ಕ್ಷೇತ್ರದಲ್ಲಿ ನಿಮಗದು ಲಭಿಸಿರುವುದು?

ಗೋಪಿ: ಒಂದು ನನ್ನ ಅಪರಿಮಿತ ನೆನಪು ಶಕ್ತಿಗಾಗಿ ಹಾಗೂ ಇನ್ನೊಂದು... ನನಗೀಗ ನೆನಪಾಗುತ್ತಿಲ್ಲ!

### ಶ್ರೇಷ್ಠ ತೊಂದರೆ!



ಪತ್ನಿ: ನೀವೇಕೆ ನನ್ನ ಭಾವಚಿತ್ರವನ್ನು ಸದಾ ನಿಮ್ಮ ಪರ್ಸ್‌ನಲ್ಲಿಟ್ಟು ಕೊಂಡಿರುತ್ತೀರಿ?

ಪತಿ: ಏಕೆಂದರೆ, ಎಂತಹ ಕಠಿಣ ತೊಂದರೆಗಳೆದುರಾದರೂ ಅದನ್ನು ನೋಡಿದ ನಂತರ ಅವು ಮಾಯವಾಗುತ್ತವೆ ಕಣೆ.

ಪತ್ನಿ: ಅಂದರೆ ನಾನು ತುಂಬಾ 'ಲಕ್ಕಿ' ಅಲ್ವಾ?

ಪತಿ: ಲಕ್ಕಿಯೋ, ಅವ–ಲಕ್ಕಿಯೋ ನಾ ಕಾಣೆ. ಆದರೆ ನಿನ್ನ ಭಾವಚಿತ್ರ ನೋಡಿದ ಬಳಿಕ, 'ಈ ತೊಂದರೆಯೆದುರು ಪ್ರಪಂಚದ ಇತರ ಎಲ್ಲಾ ತೊಂದರೆಗಳೂ ಗೌಣ...' ಎಂದು ನನಗನ್ನಿಸುತ್ತದೆ...!

### ಸಿರಿವಂತಿಕೆ

ಮಗ: ಅಪ್ಪಾ ನಾವು ಶೀಘ್ರವೇ ಶ್ರೀಮಂತರಾಗಲಿದ್ದೇವೆ.

ಅಪ್ಪ: ಹೇಗೆ ಕಣ್ಲೆ?

ಮಗ: ಪೈಸೆಯನ್ನು ರೂಪಾಯಿ ಆಗಿ ಪರಿವರ್ತಿಸುವುದು ಹೇಗೆ ಎನ್ನುವುದನ್ನು ನಾಳೆ ತಿಳಿಸಿಕೊಡುವುದಾಗಿ ನನ್ನ ಟೀಚರ್ ಹೇಳಿದ್ದಾರೆ!

–ರಮಣ್‌ಶೆಟ್ಟಿ ರೆಂಜಾಳ್, ಮುಂಬೈ

---

## ಸಮುದ್ರ ಮಥನ




### ಕೋಲಾಹಲ ಸಕಾಲಿಕ

'ಸುಧಾ' ಮೇ23ರ ಸಂಚಿಕೆ ಮುಖಪುಟ ಲೇಖನ ನಡಹಳ್ಳಿ ವಸಂತ್‌ರ 'ಹಸೆಮಣೆಯಲ್ಲಿ ಕೋಲಾಹಲ' ಸಕಾಲಿಕವಾಗಿದೆ.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ವೈ.ಜಿ.ನರಸಿಂಹನ್, ಶಿವಮೊಗ್ಗ

### ವಿಪರ್ಯಾಸ

ಸಂಸಾರ ಮುರಿದು ಬೀಳದಿರಲಿ ಎಂಬ ಮಹದುದ್ದೇಶದಿಂದ 'ಸೊಸೆಯನ್ನು ಮಗಳಂತೆ ಕಾಣಿ' ಎಂದು ಸುಪ್ರೀಂಕೋರ್ಟ್ ಆದೇಶ ನೀಡಿದ ಸಂದರ್ಭದಲ್ಲೇ ವಿಚ್ಛೇದನಗಳ ಮಹಾಪೂರ ಹರಿಯುತ್ತಿರುವುದು ವಿಪರ್ಯಾಸ.

–ಕೋಟೇಶ್ವರ ಸೂರ್ಯ ನಾರಾಯಣ ರಾವ್, ಬೆಂಗಳೂರು

### ವೈಜ್ಞಾನಿಕ ಲಹರಿ

'ನಕ್ಕಾಗ ಎಲ್ಲರ ಹಲ್ಲೂ ಬೆಳ್ಳಗೆ' ಎಂಬ ಶಿಕಾಕು ಅವರ ವಿಚಾರ ಲಹರಿ ವೈಜ್ಞಾನಿಕವಾಗಿದೆ.

–ನೆ.ಲ.ರಾಂ, ಬೆಂಗಳೂರು

### ಜೂಜಾಟದಲ್ಲಿ ಬದಿಗೆ ಸರಿದ ಕ್ರೀಡೆ

'ಕೋಲು ಚಿಮ್ಮಿ ಕಲ್ಲು ಹುಡುಕಿ' ಬಯಲು ಸೀಮೆಯ ಗ್ರಾಮೀಣ ಕ್ರೀಡೆಯ ಬಗ್ಗೆ ಪ್ರವೀಣ ಕುಲಕರ್ಣಿ ಪರಿಚಯಿಸಿದ್ದಾರೆ. ಮಲೆನಾಡಿನಲ್ಲಿ ಈ ಆಟಕ್ಕೆ 'ಕಲ್ಲು ಪ್ರಾಣಿ' ಎನ್ನುತ್ತಾರೆ. ಕ್ರಿಕೆಟ್ ಜೂಜಾಟದ ಮಾಯಾಲೋಕದಲ್ಲಿ ಶುದ್ಧ ಮನರಂಜನೆಯ ಇಂತಹ ಎಷ್ಟೋ ಗ್ರಾಮೀಣ ಕ್ರೀಡೆಗಳು ನಶಿಸಿವೆ.

–ಅಚ್ಚು, ಹುಂಚ

### ಚಿತ್ರಕಲೆ ಸಂಗೀತದ ಜುಗಲ್‌ಬಂದಿ

ಉಮಾ ಅನಂತ್ ಪರಿಚಯಿಸಿರುವ 'ಚಿತ್ರಕಲೆಗೆ ಮೃದಂಗ ಸಾಥ್' ನೀಡುವ ಕಲಾವಿದ ಮೋಹನ್ ಅಮ್ಮಣ್ಣಾಯ ಮತ್ತು ಅವರ ಕುಟುಂಬ ಅಭಿನಂದನಾರ್ಹರು.

–ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

### ಹಡೆದ ತಾಯಿಗೆ ಮಾತ್ರ ಗೊತ್ತು!

ಬಿ.ಎಲ್.ವೇಣು ಅವರ 'ಪ್ರಸಾದ' ಕಥೆಯಲ್ಲಿ ಗ್ರಾಮೀಣ ಸೊಗಡು ಢಾಳಾಗಿ ಮೂಡಿಬಂದಿದೆ. 'ಹಡೆದ ತಾಯಿಗೆ ಮಾತ್ರ ಮಗು ಯಾರ 'ಪ್ರಸಾದ' ಎಂದು ಗೊತ್ತಿರುತ್ತದೆ ಎಂಬ ಲೋಕರೂಢಿಯ ಮಾತನ್ನು ಕಥೆಗಾರರು ಬೆಂಬಲಿಸಿದ್ದಾರೆ. ಕಥೆಗೆ ಗುರು ನಾವಳ್ಳಿ ಬಿಡಿಸಿರುವ ಚಿತ್ರ ಚೆನ್ನಾಗಿದೆ.

–ಕೊಹಿಮ, ಬಸರಕೋಡು/ ಎಚ್.ಆನಂದಕುಮಾರ್, ಚಿತ್ರದುರ್ಗ/ ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ಕಥೆಗೆ ರಸಪ್ರಶ್ನೆ!

'ಪ್ರಸಾದ' ಕಥೆಯ ಕೊನೆಯಲ್ಲಿ, ನಿಜವಾದ ಷಂಡ ಯಾರು? ಗೌಡನೋ, ಕರಿಯನೋ ಕರಿಯಮ್ಮನ ಆಭರಣಗಳು ಗೌಡತಿಯ ಅಟ್ಟಕ್ಕೆ ಹೇಗೆ ಬಂದವು? ಎಂಬ ರಸಪ್ರಶ್ನೆ (ಕ್ವಿಜ್) ಗಳನ್ನು ವೇಣು ಕೊಟ್ಟಿದ್ದಾರೆ!

–ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ

### ವೇಣು ಕೃತಕ ಭಾಷೆ

ಚಿತ್ರದುರ್ಗ, ದಾವಣಗೆರೆ ಪ್ರದೇಶದ ನುಡಿಗಟ್ಟು ಬಲ್ಲ ನಮಗೆ ಬಿ.ಎಲ್.ವೇಣು 'ಪ್ರಸಾದ' ಕಥೆಯಲ್ಲಿ ಬಳಸಿರುವ ಭಾಷೆ ಕೃತಕವಾಗಿದೆ ಎನಿಸಿತು. ಬೇಕೆಂತಲೇ ಏನೇನೋ ಹಸಿ ಹಸಿ ಪದಗಳನ್ನು ಕಥೆಯಲ್ಲಿ ತುರುಕಿರುವುದನ್ನು ಕಂಡು ಮೈ ಪರಚಿಕೊಳ್ಳುವಂತೆ ಆಯಿತು.

–ಎಲ್.ಎಚ್.ಅರುಣಕುಮಾರ, ದಾವಣಗೆರೆ

### ವ್ಯಾಸ ಅಲ್ಲ, ತ್ರಿಜ್ಯ

ಮೇ 9ರ 'ಸುಧಾ' ಸಂಚಿಕೆಯ 'ದ ಡೇ ಆಫ್ ಪೈ' ಲೇಖನದಲ್ಲಿ 'ಯಾವುದೇ ವೃತ್ತದ ಪರಿಧಿಯನ್ನು ಅದರ "ವ್ಯಾಸ"ದಿಂದ ಭಾಗಿಸಿದರೆ ಬರುವ ಸಂಖ್ಯೆ ಪೈ' ಎಂದು ಪ್ರೊ. ಹಿಪ್ಪರಗಿ ತಿದ್ದುಪಡಿ ಸೂಚಿಸಿದ್ದಾರೆ. ಆದರೆ ಅದು "ವ್ಯಾಸ" ಅಲ್ಲ, "ತ್ರಿಜ್ಯ" ಎಂದಿರಬೇಕು.

–ಗುಬ್ಬಿ ರೇವಣಾರಾಧ್ಯ, ಬೆಂಗಳೂರು

### ಪುನರ್ಜನ್ಮ ನಿಜವೆ?



ಹೂಲಿ ಶೇಖರ್ ಅವರ ಪುನರ್ಜನ್ಮದ ಕುರಿತ 'ಜನುಮ ಜನುಮಕೂ' ಧಾರಾವಾಹಿ ಕುತೂಹಲಕರ ಘಟ್ಟಕ್ಕೆ ಬಂದು ನಿಂತಿದೆ. ಈ ಧಾರಾವಾಹಿ ಪ್ರಕಟವಾಗುತ್ತಿರುವ ಸಂದರ್ಭದಲ್ಲೇ ಕೊಡಗಿನಲ್ಲಿ ನಾಲ್ಕುವರ್ಷದ ಹಿಂದೆ ಇಹಲೋಕ ತ್ಯಜಿಸಿದ್ದ ಬೌದ್ಧ ಧರ್ಮಗುರು ಪೆಮಾನರ್ಬು ರಿನ್ ಪೊಚೆ ಅವರು ಪುನರ್ಜನ್ಮ ಪಡೆದಿರುವ ಸಂಗತಿ 'ಪ್ರಜಾವಾಣಿ' ಪತ್ರಿಕೆಯಲ್ಲಿ ಸುದ್ದಿಯಾಗಿದೆ. ಹಾಗಾದರೆ ಪುನರ್ಜನ್ಮ ನಿಜವೆ? ಯೋಚಿಸುವಂತಾಗಿದೆ.

–ವಿದ್ಯಾ ಹೆಗಡೆ, ಶಿವಮೊಗ್ಗ/ ರುದ್ರೇಶ್ ಬಿ.ಅದರಂಗಿ, ಕೋಲಾರ/ ಬಿ.ಆರ್.ಹಡಪದ, ಧಾರವಾಡ